**ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ**
ಸುತ್ತೂರು, ನಂಜನಗೂಡು ತಾ॥, ಮೈಸೂರು ಜಿಲ್ಲೆ॥

# ತಾಳ್ಮೆ, ಸಹನೆಅಗತ್ಯ

ಸುತ್ತೂರು, ಆಗಸ್ಟ್ 19, 2022: ಮನುಷ್ಯ ಉತ್ತಮ ಸಂಸ್ಕಾರವಂತನಾಗಲು ತಾಳ್ಮೆ ಹಾಗೂ ಸಹನೆ ಅತಿ ಮುಖ್ಯ ಎಂದು ಪ್ರಾಧ್ಯಾಪಕರಾದ ಶ್ರೀ ಹೆಚ್.ಬಿ. ದೇವಣ್ಣನವರು ಆಗಸ್ಟ್19 ರಂದು ಸುತ್ತೂರು ಶ್ರೀಮಠದಲ್ಲಿ ಶ್ರಾವಣ ಮಾಸದ 21ನೇ ದಿನದ ಪ್ರವಚನದಲ್ಲಿ ತಿಳಿಸಿದರು.

ಮುನುಷ್ಯನ ಜೀವನದಲ್ಲಿ ಸುಖ–ದುಃಖ, ಮಾನ–ಅಪಮಾನ, ಕೀರ್ತಿ–ಅಪಕೀರ್ತಿ ಎಲ್ಲವೂ ಬರುತ್ತವೆ. ಬದುಕಿನ ಏರುಪೇರುಗಳ ನಡುವೆವೂ ತಾಳ್ಮೆ ಮತ್ತು ಸಹನೆಯನ್ನು ಕಳೆದುಕೊಳ್ಳಬಾರದು. ಸಿಟ್ಟಿನ ಕೈಗೆ ಬುದ್ಧಿ ಕೊಡಬಾರದು ಎಂಬುದು ನಮ್ಮ ಹಿರಿಯರ ನುಡಿ, ಸಿಟ್ಟು ಬಂದಾಗ ವಿವೇಕ ಕೆಲಸ ಮಾಡುವುದಿಲ್ಲ, ಬುದ್ಧಿ ಮಂಕಾಗುತ್ತದೆ. ಕೊಪದಲ್ಲಿ ಕುಯ್ದುಕೊಂಡ ಮೂಗು ಮತ್ತೆ ಮರಳದು ಎಂಬಂತೆ ಸಿಟ್ಟಿನಲ್ಲಾದ ಅನಾಹುತಗಳು ಜೀವನ ಪರ್ಯಂತ ಕಾಡುವ ಸಾಧ್ಯತೆಗಳು ಇರುತ್ತವೆ. ಇಂತಹ ಸಂದರ್ಭಗಳಿಂದ ದೂರವಿದ್ದು ಸಹೆನೆ, ತಾಳ್ಮೆ, ನೇರ ನಡೆ–ನುಡಿಗಳನ್ನು ಬದುಕಿನಲ್ಲಿ ಉತ್ತಮ ಸಂಸ್ಕಾರಗಳನ್ನು ಅಳವಡಿಸಿಕೊಳ್ಳಬೇಕು. ಜೀವನದ ಅವಿಭಾಜ್ಯ ಅಂಗವಾಗಿ ರೂಢಿಸಿಕೊಳ್ಳಬೇಕು. ಹೃದಯ ಸಂಸ್ಕಾರ ಹೆಚ್ಚದಂತೆ ತಾಳ್ಮೆ, ಸಹನೆ ಬೆಳೆಯುತ್ತದೆ. ಇದಕ್ಕೆ ಮೂಲ ಆಧಾರವೇ ಸಂತರು ಹಾಗೂ ಶರಣರ ಮಾತುಗಳಾಗಿವೆ.

ಸಮಾಜದಲ್ಲಿ ಪ್ರತಿಯೊಬ್ಬರ ನಡುವೆ ಪ್ರೀತಿ, ವಿಶ್ವಾಸ ಮೂಡಿಸಲು ಮತ್ತು ಬಾಂಧವ್ಯಗಳನ್ನು ಗಟ್ಟಿಗೊಳಿಸಲು ಕಾವ್ಯ ಸಂಸ್ಕಾರ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಕಾವ್ಯಂಯಶಸೇಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ, ಸದ್ಯಃ ಪರ ನಿರ್ವೃತಯೇ ಕಾಂತಾಸಮ್ಮಿತತಯಾ ಉಪದೇಶಯುಜೇ ಎಂಬ ಶ್ಲೋಕದಲ್ಲಿ ಕಾವ್ಯ ಶಾಸ್ತ್ರದಆರು ಪ್ರಮುಖ ಪ್ರಯೋಜನಗಳು ಸಂಕಲಿತವಾಗಿವೆ. ಕಾವ್ಯ ಶಾಸ್ತ್ರವನ್ನು ಯಶಸ್ವಿಗಾಗಿ, ಧನಸಂಪಾದನೆಗಾಗಿ, ಲೋಕವ್ಯವಹಾರವನ್ನು ತಿಳಿಯಲು, ಅಮಂಗಳ ನಿವಾರಣೆಗಾಗಿ, ದಃಖಮಯವಾದ ಸಂಸಾರಚಕ್ರದಿಂದ ಮೋಕ್ಷವನ್ನು ಪಡೆಯಲು ಹಾಗೂ ಕಾಂತಾಸಮ್ಮಿತೆಯಂತೆ ಸಮಾಜಕ್ಕೆ ಶಿಕ್ಷಣ ಹಾಗೂ ಸಂಸ್ಕಾರ ನೀಡಲು ತಿಳಿಸುತ್ತದೆ. ಸಂಸ್ಕಾರಗೊಂಡ ಮನಸ್ಸು ಬಯಲಿನಲ್ಲಿ, ಶೂನ್ಯದಲ್ಲಿ, ಬಡವನಲ್ಲಿ, ಹಸಿದವನ ಕಣ್ಣುಗಳಲ್ಲಿ ದೇವರನ್ನು ಹುಡುಕಲಾರಂಭಿಸುತ್ತದೆ ಎಂದು ತಿಳಿಸಿದರು

ಗಮಕಿಗಳಾದ ಶ್ರೀ ಡಿ.ಎಂ. ಸಿದ್ದಲಿಂಗಸ್ವಾಮಿಯವರು ಕಾವ್ಯ ವಾಚಿಸಿದರು. ಸುತ್ತೂರು ಶ್ರೀ ಕ್ಷೇತ್ರದ ಶಿಕ್ಷಣ ಸಂಸ್ಥೆಗಳ ಹೆಚ್ಚುವರಿ ಸಂಯೋಜನಾಧಿಕಾರಿಗಳಾದ ಶ್ರೀ ಸಂಪತ್ತು ಹಾಗೂ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಡಿ.ವಿ. ಹೊನ್ನಪ್ಪನವರು ಸೇವಾರ್ಥ ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗ ’ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.